ಕರ್ನಾಟಕ ವಿಧಾನಸಭೆ

ಗುರುವಾರ 4ನೇ ಮೇ 2000 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ಮಧ್ಯಾಹ್ನ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಂ.ವಿ.ವೆಂಕಟಪ್ಪ) ಅವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ಅಧ್ಯಕ್ಷರು :- ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ: 03.05.2000 ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತ್ತೆಂದು ತಿಳಿಸುತ್ತಿದ್ದೇನೆ

1) ಕರ್ನಾಟಕ ಧನವಿನಿಯೋಗ ಸಂಖ್ಯೆ (1) ವಿಧೇಯಕ - 2000.

2) ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ತಿದ್ದುಪಡಿ ವಿಧೇಯಕ, 2000.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸೇಡಂ ಪುರಸಭೆಯಲ್ಲಿ ಅವ್ಯವಹಾರ

378 (3492) ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಪುರಸಭೆಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸದಸ್ಯರು ವಿವರವಾದ ದೂರನ್ನು ಜಿಲ್ಲಾಧಿಕಾರಿಗಳಿಗೆ ನೀಡಿ 2 ತಿಂಗಳಾಗಿರುವುದು ನಿಜವೆ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮವೇನು;

ಆ) ಈ ಬಗ್ಗೆ ಬೆಂಗಳೂರು ಆಯುಕ್ತರ ಕಾರ್ಯಾಲಯದಿಂದ ತಂಡವನ್ನು ಕಳುಹಿಸಿ ವಿಚಾರಣೆ ಮಾಡಲು ಆದೇಶ ನೀಡಲಾಗಿದೆಯೆ; ಹಾಗಿದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮವೇನು;

ಇ) ಪುರಸಭೆಯಲ್ಲಿ ನಡೆದಿರುವ ಈ ಅವ್ಯವಹಾರದ ಬಗ್ಗೆ ವಿಚಾರಣೆ ನಡೆಸುವ ಉದ್ದೇಶ ಸರ್ಕಾರಕ್ಕಿದೆಯೇ;

ಈ) ಹಾಗಿದ್ದಲ್ಲಿ ಕೂಡಲೇ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ನಿಜ. ಅಪಾದನೆಗಳನ್ನು ಕುರಿತು ವಿಚಾರಣೆ ಮಾಡಲು ಸೇಡಂ ಉಪವಿಭಾಗದ ಸಹಾಯಕ ಆಯುಕ್ತರನ್ನು ನೇಮಕ ಮಾಡಲಾಗಿದೆ.

ಆ) ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರನ್ನು ವಿಧಾನಸಭೆ ಅಧಿವೇಶನ ಮುಗಿದ ನಂತರ ಕಳುಹಿಸಿ ತಪಾಸಣೆ ಮಾಡಿಸ ಲಾಗುವುದು.

ಇ) ಹೌದು.

ಈ) ವಿಚಾರಣಾ ವರದಿ ಬಂದ ನಂತರ ನಿಯಮಾನುಸಾರ ಪರಿಶೀಲಿಸ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಅಧ್ಯಕ್ಷರೆ, ನನ್ನ ಎರಡನೆಯ ಪ್ರಶ್ನೆಗೆ ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರನ್ನು ವಿಧಾನಸಭೆಯ ಅಧಿವೇಶನ ಮುಗಿದ ನಂತರ ಕಳುಹಿಸಿ ತಪಾಸಣೆಯನ್ನು ಮಾಡಲಾಗುವುದೆಂದು ತಿಳಿಸಿದ್ದಾರೆ. ಈ ಅಧಿವೇಶನಕ್ಕಿಂತ ಮೊದಲು ಸೇಡಂ ಪುರಸಭೆಯ ಸದಸ್ಯರು ಮಾನ್ಯ ಸಚಿವರನ್ನು ಭೇಟಿ ಮಾಡಿ ಮತ್ತು ಎ.ಸಿ. ಸೇಡಂರವರನ್ನು ಭೇಟಿಯಾಗಿ ಪುರಸಭೆಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ದೂರು ನೀಡಿದ್ದಾರೆ. ರಾಜಕೀಯ ಒತ್ತಡದಿಂದ ಮಾಡುವುದಿಲ್ಲ. ಕೂಡಲೇ ಈ ಅವ್ಯವಹಾರಗಳು ಆಗದಂತೆ ವಿಚಾರಣೆಯನ್ನು ಮಾಡಿಸುವಂತೆ ಒಪ್ಪಿದರು. ಅವರು ಒಂದು ವಾರದಲ್ಲಿ ವಿಚಾರಣೆಯನ್ನು ಮಾಡಿಸಲು ಆಯುಕ್ತರಿಗೆ ಆದೇಶವನ್ನು ನೀಡಿದರು. ಆದರೆ ಈ ಎರಡು ತಿಂಗಳುಗಳಿಂದ ಅವರು ವಿಚಾರಣೆಯನ್ನು ಮಾಡದೆ ಸೇಂಡಂ ಪುರಸಭೆಯಲ್ಲಿ ಹೆಚ್ಚಿನ ಅವ್ಯವಹಾರವನ್ನು ಮಾಡಲು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಈಗಾಗಲೇ ಪುರಸಭೆಯ ಅನುಮತಿಯಿಲ್ಲದೆ 2 1/2 ಲಕ್ಷ ರೂಪಾಯಿಗಳನ್ನು ನೀರಿಗಾಗಿ ಖರ್ಚು ಮಾಡಿದ್ದಾರೆ. ಆದರೆ ನೀರು ಸಹ ಸರಬರಾಜು ಆಗುತ್ತಿಲ್ಲ, ಅದರ ದುರಸ್ಥಿಯು ಸಹ ಆಗಲಿಲ್ಲ. ಅದೇ ಪ್ರಕಾರವಾಗಿ ಸ್ಲಮ್ ಬೋರ್ಡ್ ವ್ಯಾಪ್ತಿಯಲ್ಲಿ ಬರುವ ಲೋಹಾರ ಗಲ್ಲಿನಲ್ಲಿ ಅವರು ಸರಿಯಾಗಿ ಕೆಲಸವನ್ನು ಮಾಡದೆ ದಿನಾಂಕ: 7. 12. 1999ರಂದು 60.000. ದಿನಾಂಕ: 10. 12. 1999ರಂದು 60.000 ಈ ಪ್ರಕಾರವಾಗಿ 3 ದಿನಗಳಲ್ಲಿ 1, 20, 000 ರೂಪಾಯಿಗಳ ಮುಂಗಡ ಹಣ ಪಡೆದು ಅವ್ಯವಹಾರವನ್ನು ಮಾಡಿದ್ದಾರೆ. ಈ ಪ್ರಕಾರ ಹೆಚ್ಚಿನ ರೀತಿಯಲ್ಲಿ ಅವ್ಯವಹಾರವನ್ನು ಮಾಡಿರುವುದಕ್ಕೆ ಅನುಕೂಲವನ್ನು ಮಾಡಿಕೊಟ್ಟಂತೆ ಆಗಲಿಲ್ಲವೇ? ಈ ರೀತಿಯ ಹೆಚ್ಚಿನ ಅವ್ಯವಹಾರವನ್ನು ತಡೆಗಟ್ಟಲು ಅವರ ಚೆಕ್ಕುಗಳು ಎ.ಸಿ. ಯವರ ಮುಖಾಂತರ ಪಾವತಿಯಾಗುವಂತೆ ವ್ಯವಸ್ಥೆಯನ್ನು ಮಾಡಿಸಲು ಕೂಡಲೇ ವಿಚಾರಣೆಗಾಗಿ ಆದೇಶವನ್ನು ನೀಡಿ ತಪ್ಪಿತಸ್ಥರ ಮೇಲೆ ಕ್ರಮವನ್ನು ಕೈಗೊಳ್ಳಲು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾವು ತಿಳಿದುಕೊಂಡಿದ್ದೇವೆ. ಅವರು ಕೂಡ ನನ್ನನ್ನು ಬಂದು ಭೇಟಿಯಾಗಿದ್ದರು, ಅಲ್ಲಿರತಕ್ಕಂತಹ ಸಹಾಯಕ ಆಯುಕ್ತರಿಂದ ತನಿಖೆಯನ್ನು ನಡೆಸಿದ್ದೇನೆ. ಏನಾದರೂ ಅನ್ಯಾಯವಾಗಿದ್ದರೆ ತೊಂದರೆಯಾಗಿದ್ದರೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನಾನೇ ಒಂದು ಸಲ ಸ್ಪಾಟ್‌ಗೆ ಹೋಗಿ ಬರುತ್ತೇನೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಿ ಮುಂದೆ ಆ ರೀತಿ ಆಗದ ಹಾಗೆ ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಅಧ್ಯಕ್ಷರೆ ಪುರಸಭೆಯ ಸದಸ್ಯರು ಕೊಟ್ಟಿರುವ ಅರ್ಜಿಗಳ ಜೆರಾಕ್ಸ್ ಕಾಪಿಗಳನ್ನು ತಮ್ಮ ಮೂಲಕ ಮಾನ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು : ಅದರ ಬಗ್ಗೆ ಮಾನ್ಯಮಂತ್ರಿಗಳು ವೆರಿಫೈ ಮಾಡಿ.